**ಸಾಕ್ಷಿಯನ್ನು ಕರೆಸಲಾಯಿತು.      ಪ್ರಮಾಣ ವಚನ ಮಾಡಿಸಲಾಯಿತು.**

**ದಿಃ08-04-2026**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಸ್ ಎಂ ವಕೀಲರಿಂದಃ**

ಆರೋಪಿಗೆ ಸಾಲ ನೀಡುವಾಗ ನನ್ನ ಗಂಡ ಇರುವ ಬಗ್ಗೆ ಸಾಕ್ಷ್ಯ ನುಡಿಸಬಲ್ಲೆ. ಆರೋಪಿ ಚೆಕ್ ನ್ನು ಸಾಲ ಮರುಪಾವತಿಗಾಗಿ ನೀಡಿರುತ್ತಾರೆ. ಆರೋಪಿ ಯಿಂದ ಚೆಕ್ ನ್ನು ಹೊರತು ಪಡಿಸಿ ಬೇರೆ ದಾಖಲಾತಿಗಳನ್ನು ಪಡೆದುಕೊಂಡಿಲ್ಲ. ಚೆಕ್ ನ ಮೇಲೆ 2 ಲಕ್ಷ ಸಾಲ ನೀಡಿರುತ್ತೇವೆ. ಸಾಲ ನೀಡಿದ 4 ತಿಂಗಳ ನಂತರ ಚೆಕ ನ್ನು ಹಾಕಿರುತ್ತೇನೆಂದರೆ ಆರೋಪಿ ದಿಃ 01.07.2024 ರಂದು ಚೆಕ್ ನೀಡಿರುವುದಾಗಿ ನುಡಿಯುತ್ತಾರೆ. ದಿಃ 03.07.2024 ರಂದು ಚೆಕ್ ಅಮಾನ್ಯವಾಗಿ ವಾಪಸ್ಸು ಬಂದಿರುತ್ತದೆ. ಆರೋಪಿ ಮನೆ ಕಟ್ಟುವಾಗ ನನ್ನಿಂದ ಬಡ್ಡಿಗಾಗಿ 2 ಲಕ್ಷ ರೂಪಾಯಿಯನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ಹಣವನ್ನು ಮರುಪಾವತಿ ಮಾಡಿದ್ದು ಚೆಕ್ ನನ್ನ ಬಳಿ ಉಳಿದುಕೊಂಡಿರುತ್ತದೆ ಎಂದರೆ ಸರಿಯಲ್ಲ.

ಆರೋಪಿ ನನಗೆ 01.07.2024 ಎಂದು ನಮೂದು ಮಾಡಿ ಯಾವುದೇ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ. ದಿಃ 04.03.2024 ರಂದು ಆರೋಪಿ ನನ್ನ ಬಳಿ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಸುಳ್ಳು ಕೇಸನ್ನು ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ನಿ ಪಿ 1 ಚೆಕ್ ಗೂ ಆರೋಪಿ ಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**